ವೇಳಾಪಟ್ಟಿ ಬದಲಾಗಿತ್ತು; ಹೀಗಾಗಿ 'ಅಮೆರಿಕಾ ಭೇಟಿಯ ಮುನ್ನಾ ದಿನ ಭಾರತದ ವಿರೋಧ ಪಕ್ಷದ ನಾಯಕನ ಬಂಧನ' ಎಂಬ ತಲೆಬರಹದ ಸುದ್ದಿ ಅಲ್ಲಿನ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು.

ಬಂಧನದ ಬಗ್ಗೆ ಕುತೂಹಲಗೊಂಡಿದ್ದ ಅಮೆರಿಕದ ಪತ್ರಕರ್ತರು ಬಂಧನದ ಹಿನ್ನೆಲೆಯ ಬಗ್ಗೆ ಕೇಳಿದರು. ಜಮೀನ್ದಾರರು ಗೇಣಿದಾರರನ್ನು ಒಕ್ಕಲೆಬ್ಬಿಸಿದ್ದನ್ನು, ಅದರ ವಿರುದ್ಧ ತಮ್ಮ ಪಕ್ಷ ಹಾಗೂ ಗೇಣಿದಾರರು ಸಮಾಜವಾದಿ ಮಾರ್ಗದಲ್ಲಿ ಪ್ರತಿಭಟಿಸಿದ್ದನ್ನು ವಿವರಿಸುತ್ತಾ ಲೋಹಿಯಾ ಹೇಳಿದರು: 'ಸಮಾಜವಾದಿ ಮಾರ್ಗ ಎಂದರೆ ಬಹಳಷ್ಟು ಸಲ ಸೆರೆಮನೆಯ ಹಾದಿಯೇ. ಸೆರೆಮನೆ, ಗುದ್ದಲಿ, ವೋಟು – ಈ ಮೂರೂ ಸಮಾಜವಾದಿಗಳ ಸಾಧನಗಳು. ಅನ್ಯಾಯದ ವಿರುದ್ಧ ಶಾಂತಿಯುತ ಹೋರಾಟಕ್ಕಾಗಿ ಸೆರೆಮನೆ; ಗುದ್ದಲಿ: ನಿರ್ಮಾಣದ ಸಂಕೇತ; ವೋಟು: ರಾಜಕೀಯ ಕ್ರಿಯೆ.'

ಅಮೆರಿಕದ ಹಲವೆಡೆ ನಡೆದ ಭಾಷಣಗಳು, ರೇಡಿಯೋ ಪ್ರಸಾರಗಳು, ಸಂದರ್ಶನಗಳು, ಚರ್ಚೆಗಳಲ್ಲಿ ಲೋಹಿಯಾರ ಸಮಾಜವಾದಿ ಚಿಂತನೆಗಳು ವ್ಯಕ್ತವಾದವು: ಕಪ್ಪು ಜನರ ಬಿಡುಗಡೆಗಾಗಿ ನಾಗರಿಕ ಅವಿಧೇಯತೆಯ ಅಸ್ತ್ರ ಅತ್ಯಗತ್ಯ ಎಂಬುದನ್ನು ಲೋಹಿಯಾ ಮತ್ತೆ ಮತ್ತೆ ಹೇಳಿದರು. ಕಪ್ಪು ಹೋರಾಟಗಾರ್ತಿ ರೋಸಾ ಪಾರ್ಕ್ಸ್ ಕೆಲ ಕಾಲ ಇದ್ದ ಶಾಲೆಯಲ್ಲಿ ವರ್ಣಭೇದದ ಬಗ್ಗೆ ಮಾತಾಡುತ್ತಾ ಸೌಂದರ್ಯದ ಪರಿಕಲ್ಪನೆಯ ಬಗೆಗಿನ ತಮ್ಮ ವಿಶಿಷ್ಟ ನೋಟವೊಂದನ್ನು ಲೋಹಿಯಾ ತೆರೆದಿಟ್ಟರು:

'ಕಳೆದ ನಾನ್ನೂರು ವರ್ಷಗಳಲ್ಲಿ ಕಪ್ಪು ಜನರೇನಾದರೂ ರಾಜಕೀಯ ಅಧಿಕಾರ ಹಿಡಿದಿದ್ದರೆ; ಆಫ್ರಿಕಾ ಖಂಡ ಸ್ವತಂತ್ರವಾಗಿದ್ದರೆ; ಯುರೋಪು ಆಫ್ರಿಕಾದ ಅಡಿಯಾಳಾಗಿದ್ದರೆ, ಆಗ ಸೌಂದರ್ಯ ಹಾಗೂ ತತ್ವಜ್ಞಾನದ ಪರಿಕಲ್ಪನೆಗಳೇ ಬೇರೆಯಾಗಿರುತ್ತಿದ್ದವು.'

ಅವತ್ತು ಲೋಹಿಯಾ, 'ಆಫ್ರಿಕಾದ ಸ್ವಾತಂತ್ರ್ಯ ಹಾಗೂ ಕಪ್ಪುಜನರ ವಿಮೋಚನೆ ಜಗತ್ತಿನ ವಿಮೋಚನೆಯ ದೃಷ್ಟಿಯಿಂದಲೂ ಅತ್ಯಗತ್ಯ' ಎಂದಿದ್ದು ಜಗತ್ತಿಗೆ ನಿಧಾನಕ್ಕೆ ಅರ್ಥವಾಗ ತೊಡಗಿತು. ಕಳೆದ ಐವತ್ತು ವರ್ಷಗಳಲ್ಲಿ ಕರಿಯರು ಅಮೆರಿಕದ ನಾಗರಿಕ ಹಕ್ಕುಗಳ ಹೋರಾಟ, ಸಾಹಿತ್ಯ, ಸಂಸ್ಕೃತಿ, ಕಲೆ, ನೃತ್ಯ, ಸಂಗೀತಗಳ ದಿಕ್ಕನ್ನೇ ಬದಲಾಯಿಸಿದರು. ಅಮೆರಿಕದ 'ಬ್ಲ್ಯಾಕ್ ಪ್ಯಾಂಥರ್ಸ್' ಭಾರತದ 'ದಲಿತ್ ಪ್ಯಾಂಥರ್ಸ್'ಗೆ ಪ್ರೇರಣೆಯಾಯಿತು.

ಜೀವನಮಟ್ಟವನ್ನು ಹೆಚ್ಚಿಸಿಕೊಳ್ಳುವ ಅಮೆರಿಕದ ಜನರ ಆತುರವನ್ನು ಲೋಹಿಯಾ ಟೀಕಿಸಿದರು: 'ಇನ್ನು ಮುಂದೆ ಈ ಜನ ಪೀಠೋಪಕರಣಗಳು ಹಾಗೂ ಕಾರ್ಪೆಟ್‌ಗಳ ಗುಲಾಮರಾಗುತ್ತಾರೆ. ಬಡಪಾಯಿ ಹೆಂಗಸರು ಈ ಮನೆಗಳನ್ನು ನಿಭಾಯಿಸುವ ತೊತ್ತಾಗುತ್ತಾರೆ. ಇವರ ಮನೆಯ ಹೆಂಗಸರು ಪೀಠೋಕರಣಗಳಿಗೋಸ್ಕರ ಬದುಕಿದ್ದಾರೋ, ಅಥವಾ ಪೀಠೋಪಕರಣಗಳು ಈ ಹೆಂಗಸರಿಗಾಗಿ ಇವೆಯೋ ಎಂಬ ಅನುಮಾನ ಮೂಡುತ್ತದೆ.'

'ರೊಟ್ಟಿಯೋ? ಸ್ವಾತಂತ್ರ್ಯವೋ?' ಸಭಿಕರೊಬ್ಬರು ಕೇಳಿದರು.

'ಎರಡೂ ಒಂದರೊಳಗೊಂದು ಬೆರೆತಿವೆ. ರೊಟ್ಟಿಯಿಲ್ಲದ ಸ್ವಾತಂತ್ರ್ಯ, ಸ್ವಾತಂತ್ರ್ಯವಿಲ್ಲದ ರೊಟ್ಟಿ ಎರಡೂ ಅರ್ಥಹೀನ' ಎಂದರು ಲೋಹಿಯಾ.

ಗೆಳೆಯರೊಡನೆ ಧೀಮಂತ ವಿಜ್ಞಾನಿ ಐನ್‌ಸ್ಟೈನ್‌ರನ್ನು ಭೇಟಿಯಾಗಲು ಹೋಗುತ್ತಿದ್ದಾಗ ಲೋಹಿಯಾ ಟ್ಯಾಕ್ಸಿ ಡ್ರೈವರನನ್ನು ಕೇಳಿದರು: 'ನಿಮಗೆ ನೆಹರು ಗೊತ್ತಾ?'

'ಇಲ್ಲ.'

'ಗಾಂಧಿ ಗೊತ್ತಾ?'

'ಲಂಗೋಟಿ ಉಟ್ಟು ಬ್ರಿಟಿಷರ ವಿರುದ್ಧ ಫೈಟ್ ಮಾಡಿದವರು; ಕೊಲೆಯಾದವರು ಅವರು ತಾನೇ?' ಇದು ಡ್ರೈವರ್ ಉತ್ತರ!

ಆಗ ಲೋಹಿಯಾ ಗೆಳೆಯರಿಗೆ ಹೇಳಿದರು: 'ನೋಡಿ! ಜನ ರಾಜಕಾರಣಿಗಳನ್ನು ನೆನೆಸಿ ಕೊಳ್ಳುವುದಿಲ್ಲ; ಗಾಂಧಿಯನ್ನು ನೆನೆಸಿಕೊಳ್ತಾರೆ.'

ಲೋಹಿಯಾ–ಐನ್‌ಸ್ಟೈನ್ ನಡುವಣ ಮಾತುಕತೆ ಜರ್ಮನ್ ಭಾಷೆಯಲ್ಲಿ ಶುರುವಾಯಿತು.

ಐನ್‌ಸ್ಟೈನ್‌ರ ಯಾವುದೋ ಪ್ರಶ್ನೆಗೆ ಲೋಹಿಯಾ, 'ರಾಜಕಾರಣಿಗಳು ಸುಳ್ಳರು' ಅಂದರು.

'ಕ್ರಿಮಿನಲ್ಸ್!' ಐನ್‌ಸ್ಟೈನ್ ನಗುತ್ತಾ ಮೃದುವಾಗಿಯೇ ಹೇಳಿದರು.

ಲೋಹಿಯಾ ಜೊತೆಯಲ್ಲಿದ್ದ ಗೆಳೆಯರಿಗೆ ಮಾತುಕತೆ ಅರ್ಥವಾಗಲಿ ಎಂದು ಇಬ್ಬರೂ ಇಂಗ್ಲಿಷ್ ಭಾಷೆಗೆ ಹೊರಳಿದರು.

ಐನ್‌ಸ್ಟೈನ್ ಜಮೀನ್ದಾರಿ ಪದ್ಧತಿಯ ಬಗ್ಗೆ ವಿಚಾರಿಸಿದರು. ಲೋಹಿಯಾ ಜಮೀನ್ದಾರಿ ಪದ್ಧತಿಯನ್ನು ವಿವರಿಸುತ್ತಾ ಭೂಹಂಚಿಕೆಯ ಬಗ್ಗೆ ಮಾತಾಡಿದರು; ಜಮೀನ್ದಾರರ ವಶದಲ್ಲಿರುವ ಬೃಹತ್ ಭೂಮಿಯನ್ನು ವಾಪಸ್ ಪಡೆದು, ಅವರ ಜೀವನ ನಿರ್ವಹಣೆಗೆ ಸಹಾಯ ಮಾಡಬೇಕೆಂಬ ಸಮಾಜವಾದಿ ಪಕ್ಷದ ನಿಲುವನ್ನು ಹೇಳಿದರು.

'ಗುಡ್ ಐಡಿಯಾ. ನೆಹರು ಇದನ್ನು ಜಾರಿಗೆ ತರುವುದಿಲ್ಲವೇನು?' ಎಂದರು ಐನ್‌ಸ್ಟೈನ್.

'ಇಲ್ಲ. ನೆಹರೂನ ಮುನ್ನಡೆಸಲು ಒಬ್ಬ ಜಾಕಿ ಇದ್ದರು. ಒಳ್ಳೆಯ ಜಾಕಿ ಇರುವ ತನಕ ನೆಹರು ಸರಿಯಾಗಿ ಓಡುತ್ತಿದ್ದರು. ಜಾಕಿ ಇಳಿದು ಹೋದ ತಕ್ಷಣ'

ಐನ್‌ಸ್ಟೈನ್ ನಗತೊಡಗಿದರು.

ಲೋಹಿಯಾ ಭಾರತಕ್ಕೆ ಅಗತ್ಯವಾದ ಅಧಿಕಾರ ವಿಕೇಂದ್ರೀಕರಣದ ಪರಿಕಲ್ಪನೆ, ಸಣ್ಣ ಘಟಕ ಯಂತ್ರ ಮುಂತಾದ ಸಮಾಜವಾದಿ ಪಕ್ಷದ ಐಡಿಯಾಗಳನ್ನು ಐನ್‌ಸ್ಟೈನ್‌ಗೆ ವಿವರಿಸಿದರು. ಅಧಿಕಾರ ಕೇವಲ ಕೇಂದ್ರ ಮತ್ತು ರಾಜ್ಯಗಳಲ್ಲಿ ಕೇಂದ್ರೀಕೃತವಾಗದೆ ಜಿಲ್ಲೆ, ಗ್ರಾಮಗಳ ಮಟ್ಟಕ್ಕೂ ವಿಸ್ತರಿಸುವ ಚತುಸ್ತಂಭ ರಾಷ್ಟ್ರದ ಕಲ್ಪನೆಯನ್ನು ವಿವರಿಸಿದರು.

ಎಲ್ಲ ದೇಶಗಳಿಗೂ ಅಗತ್ಯವಾಗಿದ್ದ ಲೋಹಿಯಾರ ಐಡಿಯಾಗಳ ಬಗ್ಗೆ ಐನ್‌ಸ್ಟೈನ್‌ರಲ್ಲಿ ಅಪಾರ ಆಸಕ್ತಿ ಮೂಡಿತು.

ಹೊರಡುವ ಮುನ್ನ ಐನ್‌ಸ್ಟೈನ್‌ರನ್ನು ಲೋಹಿಯಾ ಕೇಳಿದರು:

'ನಾನೊಂದು ಪ್ರಶ್ನೆ ಕೇಳಲೆ? ನಿಮ್ಮಿಂದ ಉತ್ತರ ಬಯಸಿ ಬಂದಿದ್ದೇನೆ. ನಾನು ಬರ್ಲಿನ್‌ನಲ್ಲಿದ್ದಾಗ ನಮ್ಮೆದುರು ಎರಡು ಆಯ್ಕೆಗಳಿದ್ದವು: ಒಂದು ಮಹಾತ್ಮ ಗಾಂಧಿ. ಮತ್ತೊಂದು ಅಣುಶಕ್ತಿ. ಈಗ ಗಾಂಧಿ ಇಲ್ಲ. ನೀವು ರೂಪಿಸಿದ ಅಣುಶಕ್ತಿ ಈಗ ಸಾವಿಗೆ ಮತ್ತೊಂದು ಹೆಸರು ಎನ್ನುವಂತಾಗಿದೆ. ಈ ಉಸಿರುಗಟ್ಟಿಸುವ ಮೊಸಳೆಯ ಬಾಯಿಂದ ಮಾನವಕುಲ ಬಿಡುಗಡೆಯಾಗುವುದು ಹೇಗೆ? ಇದಕ್ಕೆ ಉತ್ತರವೇನು? ಈ ಯುಗದಲ್ಲಿ ನಮ್ಮನ್ನು ವಿಮೋಚನೆಗೊಳಿಸುವ ಹೊಸ ನಂಬಿಕೆಯೊಂದು ಬೇಕಾಗಿದೆ. ಏನಾದರೂ ಉತ್ತರ ಹೇಳಬಲ್ಲಿರಾ?'

ಈ ಪ್ರಶ್ನೆಗೆ ಐನ್‌ಸ್ಟೈನ್ ತಕ್ಷಣ ಉತ್ತರ ಕೊಡಲಿಲ್ಲ.

ಇಡೀ ಮಾತುಕತೆಯಲ್ಲಿ ಲೋಹಿಯಾರ ಮುಕ್ತ, ಸ್ವತಂತ್ರ ಮನಸ್ಸನ್ನು ಐನ್‌ಸ್ಟೈನ್ ಆಗಾಗ್ಗೆ ಗುರುತಿಸಿದರು. ಎರಡು ಗಂಟೆಗಳ ಮಾತುಕತೆ ಲೋಹಿಯಾಗೆ ತೃಪ್ತಿ ತಂದಿತ್ತು. ಹೊರಟು ನಿಂತ ಲೋಹಿಯಾ ಬೇಡಬೇಡವೆಂದರೂ ಐನ್‌ಸ್ಟೈನ್ ಲೋಹಿಯಾರನ್ನು ಕಳಿಸಿಕೊಡಲು ಹೊರಗೆ ಫುಟ್‌ಪಾತ್ ಬಳಿ ಕಾಯುತ್ತಿದ್ದ ಕಾರಿನವರೆಗೂ ಬಂದರು. 'ನೀವು ಬಂದಿದ್ದು ತುಂಬಾ ಒಳ್ಳೆಯದಾಯಿತು. ನಾನು ನಿಜವಾದ ಮನುಷ್ಯರನ್ನು ಭೇಟಿ ಮಾಡುವುದೇ ಅಪರೂಪ. ನಾವೇಕೆ ಇಷ್ಟು ಒಂಟಿಯಾಗುತ್ತಿದ್ದೇವೆ?' ಎಂದು ಐನ್‌ಸ್ಟೈನ್ ಉದ್ಗರಿಸಿದರು.

ಐನ್‌ಸ್ಟೈನ್ ಜೊತೆಗಿನ ಮಾತುಕತೆಯುದ್ದಕ್ಕೂ ಲೋಹಿಯಾ, 'ವಿಜ್ಞಾನದಂತೆ ರಾಜಕೀಯದಲ್ಲೂ ನಿಖರವಾದ ಗ್ರಹಿಕೆಗಳನ್ನು ಪಡೆಯಲು ಯಾವುದಾದರೂ ಮಾರ್ಗವಿದೆಯೇ?' ಎಂಬುದನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುತ್ತಲೇ ಇದ್ದರು.

ಲೋಹಿಯಾರ ಅಮೆರಿಕದ ಕೊನೆಯ ಭಾಷಣ ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾಲಯದ ವಿದ್ಯಾರ್ಥಿ–ಟೀಚರುಗಳ ಸಮೂಹವನ್ನು ಉದ್ದೇಶಿಸಿದ್ದಾಗಿತ್ತು. ಅವರ ಭಾಷಣ ಕೇಳಿದ ವಿದ್ಯಾರ್ಥಿಯೊಬ್ಬ ಹೇಳಿದ: 'ಅಮೆರಿಕದ ಒಬ್ಬ ರಾಜಕಾರಣಿಯಾದರೂ ಹೀಗೆ ಮಾತಾಡುವುದಿಲ್ಲ. ಅಂಥ ಒಬ್ಬನಿದ್ದರೂ ನಾನು ಹೆಮ್ಮೆಪಡುತ್ತಿದ್ದೆ.'

ನಲವತ್ತನಾಲ್ಕು ದಿನಗಳ ಅಮೆರಿಕ ಪ್ರವಾಸ ಮುಗಿಯುವ ಹಿಂದಿನ ರಾತ್ರಿ ಲೋಹಿಯಾ ಅಮೆರಿಕದ ಇಟಾಲಿಯನ್ ಚೈನೀಸ್ ಕ್ಲಬ್ಬಿನಲ್ಲಿ ಗೆಳೆಯರೊಡನೆ ಕಳೆದರು. ಗೆಳೆಯರ ಬರ್ಲೆಸ್ಕ್ ಡ್ಯಾನ್ಸ್ ಅವರಿಗೆ ಬಲು ಹಿಡಿಸಿತು.

ಈ ಅಮೆರಿಕದ ಭೇಟಿಯ ಎಲ್ಲ ವಿವರಗಳನ್ನೂ ತಮ್ಮ ಜೊತೆಗಿದ್ದ ಹ್ಯಾರಿಸ್ ವೊಫರ್ಡ್ ಬಹುತೇಕ ಕರಾರುವಾಕ್ಕಾಗಿ ಬರೆದ ರೀತಿ ಲೋಹಿಯಾಗೆ ವಿಸ್ಮಯ ಹುಟ್ಟಿಸಿತು. ಗಹನವಾದ ವಿಷಯಗಳ ಜೊತೆಗೆ ಸಣ್ಣಪುಟ್ಟ ವಿವರಗಳನ್ನೂ ಹ್ಯಾರಿಸ್ ಗಮನಿಸಿದ್ದರು: